ದಿನಾಂಕ ಃ 11-08-2017 ಓ ಎಸ್ ನಂ. 240/2013

ಡಿ. ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ. ಆರ್.ಎಸ್.ಕೆ. ವಕೀಲರಿಂದ</u>

ಈಗ ನನಗೆ 58 ವರ್ಷ ವಯಸ್ಸು. ನಾನು ಅನಕ್ಷರಸ್ಥ. ನನ್ನ ಜನ್ಮ ದಿನಾಂಕ ಹೇಳಲು ಆಗುವುದಿಲ್ಲ. ನನಗೆ ಈಗ 51 ವರ್ಷ ವಯಸ್ಸಾಗಿದ್ದರೂ 58 ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಶಿವಪ್ಪ ಇವರನ್ನು ನೋಡಿದ್ದೇನೆ. ವಾದಿಯ ತಂದೆ ಶಿವಪ್ಪ 1971 ನೇ ಇಸ್ವಿಯಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆ ಮತ್ತು ವಾದಿಯ ತಂದೆ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸುವ ದಾಖಲೆ ಇಲ್ಲ. ನನಗೆ ಪಿತ್ರಾರ್ಜಿತವಾಗಿ ಬಂದ ಜಮೀನುಗಳ ವಿವರ ಹೇಳಬಲ್ಲೆ. ಸರ್ವೆ ನಂ. 94/3 ಕ್ಷೇತ್ರ 1 ಎಕರೆ 3 ಗುಂಟೆ, 94/8+1 ರಲ್ಲಿ ವಿಸ್ತೀರ್ಣ ಎಷ್ಟು ಇದೆ ಎಂದು ಗೊತ್ತಿಲ್ಲ, ಸರ್ವೆ ನಂ. 84/1 ಬ ಕ್ಷೆತ್ರ 4 ಎಕರೆ 5 ಗುಂಟೆ, ಸರ್ವೆ ನಂ. 95/2 ಕ್ಷೆತ್ರ 4 ಎಕರೆ, ಸರ್ವೆ ನಂ. 15/3 ಕ್ಷೆತ್ರ 4 ಎಕರೆ 12 ಗುಂಟೆ, ಸರ್ವೆ ನಂ. 98/8 ಕ್ಷೆತ್ರ 1 ಎಕರೆ 3 ಗುಂಟೆ ಇವುಗಳು ನನ್ನ ತಂದೆ ಮತ್ತು ವಾದಿಯ ತಂದೆಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳು ಆಗಿವೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ